
# ಮಗಳು ಬೆಳದಿಂಗಳು



■ ಬಿ.ಆರ್. ಸತ್ಯನಾರಾಯಣ
ಕಲೆ: ರಘುಪತಿ ಶೃಂಗೇರಿ

ಮಧ್ಯಾಹ್ನದ ನಂತರ, ಒಂದಿಷ್ಟು ಬಿಡುವಾಗಿ ಕುಳಿತಿದ್ದ ರಾಜುವಿಗೆ, ಬೆಳಿಗ್ಗೆ ಮಗಳು ಹೇಳಿದ್ದು ನೆನಪಾಯಿತು. ಅಂದಿನ ಸಂಪಾದನೆ 600–700 ಎಂದು ಅಂದಾಜಾದಾಗ, ನಿಟ್ಟುಸಿರು ಬಿಟ್ಟ. ಇಂದಿನ ಸಂಪಾದನೆಯಿಡೀ ಖಾಲಿಯಾದರು ಸರಿಯೆ, ಮಗಳ ಆಸೆಯನ್ನು ಈಡೇರಿಸಬೇಕು. ಉಮಾ ಸ್ವಲ್ಪ ಬೇಸರ ಮಾಡಿಕೊಳ್ಳಬಹುದು, ಅಷ್ಟೆ ಎಂದು ಮನಸ್ಸು ಹಠ ಹಿಡಿಯುತ್ತಿತ್ತು. ಅಷ್ಟಕ್ಕೂ ಮಗಳು ಕೇಳಿದ್ದು ಏನು? ಎಗ್‌ರೈಸ್ ಆನ್‌ಲೈನ್‌ನಲ್ಲಿ ತರಿಸಿ, ಮನೆಯಲ್ಲಿ ಒಟ್ಟಿಗೆ ಊಟ ಮಾಡೋಣ ಎಂದಿದ್ದಳು.

ಮಗಳು, ರಾಜ್ಯಮಟ್ಟದ ಸ್ಪರ್ಧೆಯೊಂದರಲ್ಲಿ ಪ್ರಥಮ ಬಹುಮಾನ ಗೆದ್ದಿದ್ದಳು. ನೆನ್ನೆ ರಾತ್ರಿ ಮನೆ ತಲುಪಿದಾಗ, ಮಕ್ಕಳಿಬ್ಬರೂ ಮಲಗಿಬಿಟ್ಟಿದ್ದರು. ಸ್ನಾನ ಮುಗಿಸಿ ಬಂದವನಿಗೆ ಊಟ ಬಡಿಸುತ್ತಾ, ಉಮಾ ಮಗಳ ಸಾಧನೆಯ ಬಗ್ಗೆ ಹೇಳಿದ್ದಳು. ರಾಜುಗೆ ಆಕಾಶದಷ್ಟು ಖುಷಿಯಾಯಿತು. ಮಗಳು ಓದುವರದಲ್ಲೂ, ಇತರೆ ವಿಷಯಗಳಲ್ಲೂ ಇಡೀ ಶಾಲೆಗೆ ಮೊದಲಿಗಳಾಗಿದ್ದಳು. ಶಾಲೆಯ ಮಿಸ್ಸುಗಳು ಅವಳ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಿದ್ದರು.

ಬೆಳಿಗ್ಗೆ ಎದ್ದಾಗ, ಮಗಳಿಗೆ ವಿಷ್ ಮಾಡಿ, ಇದೇ ಖುಷಿಯಲ್ಲಿ ನಿನಗೆ ಏನು ಬೇಕು ಹೇಳು, ಕೊಡಿಸುತ್ತೇನೆ ಎಂದಿದ್ದ. ಮಗಳು ಮೊದಲು ಹಿಂಜರಿದರೂ, ಮೇಲಿಂದ ಮೇಲೆ, ಅಪ್ಪ ಕೇಳಿದ್ದರಿಂದ ಎಗ್‌ರೈಸ್ ಬಗ್ಗೆ ಹೇಳಿದ್ದಳು. ರಾಜು ಮಕ್ಕಳ ಜೊತೆ ತಿಂಡಿಗೆ ಮಾತ್ರ ಇರುತ್ತಿದ್ದ. ಮಧ್ಯಾಹ್ನದ ಊಟಕ್ಕೆ ಅವನಿಗೆ ಹೊತ್ತೇ ಇರುತ್ತಿರಲಿಲ್ಲ. ರಾತ್ರಿ ಅವನು ಬರುವ ಹೊತ್ತಿಗೆ ಮಕ್ಕಳು ಮಲಗಿಬಿಡುತ್ತಿದ್ದರು. ರಜಾದಿನಗಳೂ ಬಹುತೇಕ ಇದೇ ದಿನಚರಿ. ಈ ನೆಪದಲ್ಲಿ ನಾಲ್ವರೂ ಒಟ್ಟಿಗೆ ಕುಳಿತು ತಿನ್ನಬಹುದೆಂಬುದು ಅವಳ ಯೋಚನೆ. ಇಂದು ಬೇಗ ಹೋಗುವುದಾಗಿ ಮ್ಯಾನೇಜರ್‌ಗೆ ಮೊದಲೇ ತಿಳಿಸಿಬಿಟ್ಟಿದ್ದ. ಯಾವತ್ತೂ ರಜ, ಬ್ರೇಕ್ ಎಂದು ಕೇಳದ ರಾಜು ಕೇಳಿದ್ದರಿಂದ ಮ್ಯಾನೇಜರ್ ಮರುಮಾತನಾಡದೆ ಒಪ್ಪಿಕೊಂಡಿದ್ದ. ಬೇಗ ಹೊರಡುವುದರಿಂದ, ಇಂದಿನ ಸಂಪಾದನೆಯಲ್ಲಿ ನೂರಿನ್ನೂರು ಕಡಿಮೆಯಾಗುತ್ತಿತ್ತು. ಊರಿಗೆ ಫೋನ್ ಮಾಡಿದ್ದಾಗ, ಅಪ್ಪ, ತಿಂಗಳ ಕೊನೆಗೆ ತೋಟದಲ್ಲಿ ಮಾಡಿಸಬೇಕಿದ್ದ ಪೂಜೆಯ ವಿಷಯ ತಿಳಿಸಿದ್ದರು. ಏನಿಲ್ಲವೆಂದರೂ ಹತ್ತನ್ನೆರಡು ಸಾವಿರ ಬೇಕೇಬೇಕು.

ಅಪ್ಪನೇನು ಹಣ ಕೇಳುತ್ತಿರಲಿಲ್ಲ. ಆದರೆ, ಮಗನಾಗಿ